ಅಣೆಕಟ್ಟನ್ನು ಕೆ.ಆರ್.ಎಸ್. ಮಾದರಿಯಲ್ಲಿ ಸುಂದರ ಉದ್ಯಾನ ನಿರ್ಮಿಸಲು ಸರ್ಕಾರವು ಉದ್ದೇಶಿಸಿದೆಯೇ ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಗೆ ನೀಲಿ ನಕ್ಷೆ ತಯಾರಿಸಲಾಗಿದೆಯೇ ;

ಇ) ಈ ಬಗ್ಗೆ ಕೈಗೊಳ್ಳಲಿರುವ ಸರ್ಕಾರದ ಮುಂದಿನ ಕ್ರಮವೇನು (ಮಾಹಿತಿ ನೀಡುವುದು) ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಕಬಿನಿ ಜಲಾಶಯದ ಕೆಳಭಾಗದಲ್ಲಿ ಉದ್ಯಾನವನವನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇರುತ್ತದೆ.

ಆ) ಈ ಕಾಮಗಾರಿಗೆ ಇನ್ನೂ ನೀಲಿ ನಕ್ಷೆ ತಯಾರಿಸಿರುವುದಿಲ್ಲ.

ಇ) ಕರ್ನಾಟಕ ರಾಜ್ಯದ ವಿವಿಧ ನೀರಾವರಿ ಜಲಾಶಯಗಳ / ಅಣೆಕಟ್ಟೆಗಳ ಸ್ಥಳಗಳಲ್ಲಿ ಉದ್ಯಾನ / ಉಪವನ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆಯನ್ನು ತಯಾರಿಸಲು ಸರ್ಕಾರವು ಉನ್ನತ ಮಟ್ಟದ ಒಂದು ಸಮಿತಿಯನ್ನು ದಿನಾಂಕ : 25.5.2010 ರಂದು ರಚಿಸಿದ್ದು, ನೀಲಿ ನಕ್ಷೆ ತಯಾರಿಸಿ ಕ್ರಮ ವಹಿಸಲಾಗುವುದು.

**ಜಮೀನನ್ನು ಕೈಗಾರಿಕಾ ಪ್ರದೇಶಕ್ಕೆ ನೀಡುವುದು**

734(858) ಶ್ರೀ ಚಿಕ್ಕಣ್ಣ (ಹೆಚ್.ಡಿ. ಕೋಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಆಲನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಳ್ಳದ ಮನುಗನಹಳ್ಳಿ ಗ್ರಾಮದ ಸರ್ವೆ ನಂಬರ್‌ಗಳಲ್ಲಿ ಸುಮಾರು 1,000 ಎಕರೆ ಕೃಷಿ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮಂಜೂರು ಮಾಡಲು ಜಮೀನಿನ ಭೂ ಮಾಲೀಕರಿಗೆ ನೋಟೀಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಜಮೀನು ಕೃಷಿ ಬೆಳಗೆ ಅತ್ಯಂತ ಉಪಯುಕ್ತವಾದ ಮಣ್ಣಿನಿಂದ ಕೂಡಿದ್ದು, ರೈತರ ವಿರೋಧದ ನಡುವೆಯೂ ಈ ಜಮೀನು ವಶಪಡಿಸಿಕೊಳ್ಳಲು ನೋಟೀಸ್ ನೀಡಿರುವುದು ನ್ಯಾಯ ಸಮ್ಮತವೇ ;

ಇ) ಹಾಗಿದ್ದಲ್ಲಿ, ಮೇಲ್ಕಂಡ ಕೃಷಿ ಜಮೀನನ್ನು ಕೆ.ಐ.ಎ.ಡಿ.ಬಿ.ಗೆ ನೀಡುವ ಉದ್ದೇಶವನ್ನು ಕೈಬಿಡಲು ಹಾಗೂ ರೈತರ ಹಿತ ಕಾಪಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು, ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು ಹಳ್ಳದ ಮನುಗನಹಳ್ಳಿ ಗ್ರಾಮದ 990-08 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆ.ಐ.ಎ.ಡಿ.ಬಿ. ಕಾಯ್ದೆ ಕಲಂ 3(1) 1(3) 28(1)ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಈ ಜಮೀನಿನ ಮಾಲೀಕರಿಗೆ ಕೆ.ಐ.ಎ.ಡಿ. ಕಾಯ್ದೆ ಕಲಂ 28(2)ರಡಿ ನೋಟೀಸ್ ನೀಡಲಾಗಿದೆ ;

ಆ) ಸ್ವಾಧೀನಪಡಿಸುತ್ತಿರುವ ಹೆಚ್ಚಿನ ಜಮೀನು ಮಳೆ ಆಶ್ರಿತ ಖುಷ್ಕಿ ಜಮೀನಾಗಿದೆ. ಈ ಭೂಸ್ವಾಧೀನ ಕ್ರಮವನ್ನು ವಿರೋಧಿಸಿ, ರೈತರಿಂದ ಯಾವ ಪ್ರತಿಭಟನೆಗಳೂ ಇರುವುದಿಲ್ಲ ;

ಇ) ಈ ಭೂಸ್ವಾಧೀನಕ್ಕೆ ಯಾವುದೇ ವಿರೋಧ ವ್ಯಕ್ತವಾಗದೇ ಇರುವ ಕಾರಣ, ಭೂಸ್ವಾಧೀನ ಪ್ರಕ್ರಿಯೆಯ ಉದ್ದೇಶವನ್ನು ಕೈಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಭೂಸ್ವಾಧೀನಕ್ಕೆ ಒಳಪಡುವ ಜಮೀನಿಗೆ ಸೂಕ್ತ ಪರಿಹಾರ ಪಾವತಿಸಲಾಗುತ್ತದೆ.

**ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಾಣ ಮಾಡುವುದು**

735(1117) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :

ನಂಜುಂಡಪ್ಪ ವರದಿಯ ಆಧಾರದ ಮೇಲೆ ಕರ್ನಾಟಕ ನೀರಾವರಿ ನಿಗಮದಿಂದ ಚಿಂಚೋಳಿ ತಾಲ್ಲೂಕಿನ ಮುಲ್ಲಾಮಾರಿ ನದಿಯ ಮೇಲೆ ಜುಟ್ಟೂರ ಗ್ರಾಮದ ಹತ್ತಿರ ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ